*ಎಸ್‌ಃನಂ.214/2015*

*ಪಿ.ಡಬ್ಲ್ಯೂ-3*

***ದಿಃ 23-02-2023 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.***

***ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಕೆ ಎಲ್ ಆರ್ ವಕೀಲರಿಂದ***

ಹಾಲುಸಿದ್ದಪ್ಪನವರ ಜೀವಿತಾ ಕಾಲಾವಧಿಯಲ್ಲಿ ದಿಃ ***12-02-1984*** ರಂದು ಪಾಲು ಪಟ್ಟಿ ಆಸ್ತಿತ್ವದಲ್ಲಿ ಇರಲಿಲ್ಲ ಎಂದರೆ ಸರಿ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ಎಲ್ಲಾ ವಿಚಾರಗಳು ಸುಳ್ಳು ಎಂದರೆ ಸರಿಯಲ್ಲ. ಹಾಲುಸಿದ್ದಪ್ಪನವರ ಹೆಂಡತಿಯ ಜೊತೆ ನಾನು ಶಾರೀಕಾಗಿ ಲಿಂಗದಹಳ್ಳಿ ಹೋಬಳಿ, ತ್ಯಾಗದಬಾಗಿ ಗ್ರಾಮದ ಆಸ್ತಿಯನ್ನು ಲಪಾಟಯಿಸುವ ಉದ್ದೇಶದಿಂದ ದಿಃ ***12-02-1984*** ರ ಪಾಲು ಪಟ್ಟಿಯನ್ನು ಸೃಷ್ಠಿ ಮಾಡಿದ್ದೇನೆಂದರೆ ಸರಿಯಲ್ಲ. ಹಾಲು ಸಿದ್ದಪ್ಪ ಮತ್ತು ಕೊಟ್ಟೂರು ಬಸವರಾಜಪ್ಪನವರು ದಾವ ಸ್ವತ್ತುಗಳನ್ನು ***1984*** ರಲ್ಲಿ ವಿಭಾಗ ಮಾಡಿಕೊಂಡಿದ್ದಾರೆಂದರೆ ಸರಿ. ಸಾಕ್ಷಿ ಸ್ವತಃ ಮುಂದುವರಿದು ಸದರಿ ವಿಭಾಗ ಪತ್ರವನ್ನು ನಾನೇ ಬರೆದಿರುತ್ತೇನೆ, ಆದರೆ ವಿಭಾಗ ಪತ್ರದಂತೆ ಖಾತೆ ವರ್ಗಾವಣೆ ಆಗಿರುವುದಿಲ್ಲ ಎಂದು ನುಡಿಯುತ್ತಾರೆ. ಹಾಲು ಸಿದ್ದಪ್ಪನವರಿಗೆ ಬಂದ ಆಸ್ತಿ ಕೊಟ್ಟೂರು ಬಸಪ್ಪನವರಿಗೆ ಬಂದಂತಹ ಆಸ್ತಿಯನ್ನು ಅವರರವರೇ ಪ್ರತ್ಯೇಕ ಸ್ವಾಧೀನವನ್ನು ಹೊಂದಿ ಅವರೇ ಅನುಭವಿಸುತ್ತಿದ್ದಾರೆಂದರೆ ಸರಿ. ಆಲಾಗಾಯಿತಿನಿಂದ ಅವರು ಬೇರೆ ಬೇರೆ ಮನೆಗಳಲ್ಲಿ ವಾಸವಾಗಿದ್ದಾರೆ. ಹಾಲುಸಿದ್ದಪ್ಪನವರ ಕುಟುಂಬಕ್ಕೆ ಸಹಾಯ ಮಾಡುವ ಉದ್ದೇಶದಿಂದ ನಾನು ಸುಳ್ಳು ಸಾಕ್ಷ್ಯ ಪ್ರಮಾಣ ಪತ್ರವನ್ನು ಸಲ್ಲಿಸಿದ್ದೇನೆಂದರೆ ಸರಿಯಲ್ಲ. ನಮ್ಮ ಊರಿನಲ್ಲಿ ಮರುಳುಸಿದ್ದಪ್ಪ ಎಂಬ ವ್ಯಕ್ತಿ ಜೀವಂತವಾಗಿದ್ದಾರೆ. ನಮ್ಮ ಊರಿನಲ್ಲಿ ಈಗ ಜಿ.ಪಿ.ಲಿಂಗೇಗೌಡ ಜೀವಂತವಾಗಿದ್ದಾರೆ. ಜಿ.ಟಿ ಚಂದ್ರಪ್ಪ, ಜಿ.ಟಿ ಪರಮೇಶ್ವರಪ್ಪನವರು ಈಗ ಮರುಣ ಹೊಂದಿರುತ್ತಾರೆ.

ಮರು ವಿಚಾರಣೆಃ ಇಲ್ಲ

***(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)***

***ಓ. ಕೇ. ಸ. ಇ. ಎ. ಒ.***

Sd/-

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**

**ಪ್ರ.ದ.ನ್ಯಾ.ದಂ.ರವರು,ತರೀಕೆರೆ.**